೪. ಅಣ್ಣಾಸಾಬ್ ತಾತೋಬ ಜಾಧವ
೫. ಇಲಾಡಿ ಗೈಬುಸಾಬ್ ಮುಲ್ತಾನಿ
೬. ಅಪ್ಪಾಸಾಬ್ ಪೋರೆ
(ಇವರೆಲ್ಲರೂ ನಂದಿಕುರಳಿ ಗ್ರಾಮಸ್ಥರು)

(ಈ) ತನಿಖೆ ಮುಗಿಸಿ ಆರೋಪಿಗಳ ವಿರುದ್ಧ ದೋಷಾರೋಪಣ ಪತ್ರವನ್ನು ಜೆ.ಎಂ.ಎಫ್.ಸಿ ರಾಯಬಾಗ್ ಕೋರ್ಟಿಗೆ ದಿನಾಂಕ ೧೨-೧-೧೯೮೭ ರಂದು ಸಲ್ಲಿಸಲಾಗಿದೆ.

ಕರ್ನಾಟಕದಲ್ಲಿ ಹಸಿರು ಕಾರ್ಡು ಹಾಗೂ ಕೆಂಪು ಕಾರ್ಡುಗಳ ಹಂಚಿಕೆಯಲ್ಲಿ ತಾರತಮ್ಯವಾದ ಬಗ್ಗೆ

೧೭೯ (೨೩೨೬) ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಆಹಾರ ಕಾನೂನು ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

(ಅ) ರಾಜ್ಯದಲ್ಲಿ ಒಟ್ಟಿಗೆ ಹಸಿರು ಕಾರ್ಡು ಹಾಗೂ ಕೆಂಪು ಕಾರ್ಡುದಾರರ ಸಂಖ್ಯೆ ಎಷ್ಟು ?

(ಆ) ಆರ್ಥಿಕವಾಗಿ ಬಡತನದ ರೇಖೆಯಿಂದ ಕೆಳಗೆ ಇರುವ ಕುಟುಂಬಗಳಿಗೆ ಹಸಿರು ಕಾರ್ಡು ಸರಿಯಾಗಿ ಮುಟ್ಟಲಿಲ್ಲವೆಂದು ದೂರಿದ್ದರೂ ಸರಿಪಡಿಸುವುದರಲ್ಲಿ ಸರ್ಕಾರದವರಿಗೆ ಆಸಕ್ತಿ ಇಲ್ಲದೆ ಇರುವುದಕ್ಕೆ ಕಾರಣಗಳೇನು ?

(ಇ) ಸರ್ಕಾರದವರ ನಿಯಮಗಳನ್ನು ಉಲ್ಲಂಘಿಸಿ ಶ್ರೀಮಂತರು ಪಡೆದಿರುವ ಹಸಿರು ಕಾರ್ಡನ್ನು ವಾಪಸ್ಸು ಪಡೆದು ಶ್ರೀಮಂತರು ಮೋಸಮಾಡಿದ್ದಕ್ಕಾಗಿ ಹಸಿರು ಅಥವಾ ಕೆಂಪು ಕಾರ್ಡನ್ನು ರದ್ದುಗೊಳಿಸುವುದಕ್ಕಾಗಿ ಸರ್ಕಾರದವರು ತೀರ್ಮಾನ ತೆಗೆದುಕೊಳ್ಳುವುದಕ್ಕೆ ತಡವಾಗುತ್ತಿರುವುದಕ್ಕೆ ಕಾರಣವೇನು ?

ಶ್ರೀ ಎ. ಲಕ್ಷ್ಮೀಸಾಗರ್(ಆಹಾರ ಮತ್ತು ಕಾನೂನು, ನಾಗರೀಕ ಸರಬರಾಜು ಮಂತ್ರಿಗಳು).—

(ಅ) ರಾಜ್ಯದಲ್ಲಿ ೩೧.೧ ಲಕ್ಷ ಹಸಿರು ಕಾರ್ಡುಗಳನ್ನು ೨೬.೫೬ ಲಕ್ಷ ಕೇಸರಿ ಕಾರ್ಡುಗಳನ್ನು ವಿತರಿಸಲಾಗಿದೆ.

(ಆ) ಆರ್ಥಿಕವಾಗಿ ಬಡತನ ರೇಖೆಯಿಂದ ಕೆಳಗೆ ಇರುವ ಕುಟುಂಬಗಳಿಗೆ ಹಸಿರು ಪಡಿತರ ಚೀಟಿ ಸರಿಯಾಗಿ ಮುಟ್ಟಲಿಲ್ಲವೆಂಬ ದೂರು ಬಂದ ತಕ್ಷಣ ಸರಿಪಡಿಸಲಾಗಿದೆ.

(ಇ) ತಡವಾಗಿಲ್ಲ. ಅನರ್ಹ ಕುಟುಂಬಗಳು ಪಡೆದ ಹಸಿರು ಕಾರ್ಡುಗಳಿನ್ನು ರದ್ದುಗೊಳಿಸಲಾಗಿದೆ.

ಪಟ್ಟಣಗಳಲ್ಲಿ ಹಂಚಿರುವ ಆಹಾರ ಧಾನ್ಯಗಳ ಬಗ್ಗೆ

೧೮೦ (೨೯೮ ಬಿ) ಶ್ರೀ ಟಿ. ಎಸ್. ಮಣಿ (ಕೆ. ಜಿ. ಎಫ್.).—ಮಾನ್ಯ ಆಹಾರ ಕಾನೂನು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

(ಅ) ಕರ್ನಾಟಕ ರಾಜ್ಯದ ವಿವಿಧ ಪಟ್ಟಣಗಳಲ್ಲಿ ಹಂಚಿರುವ ಆಹಾರ ಧಾನ್ಯಗಳ ಹಾಗೂ ಅವಶ್ಯಕ ವಸ್ತುಗಳ ತಲಾವಾರು ಪ್ರಮಾಣಗಳೆಷ್ಟು ?

(ಆ) ಜನವರಿ ತಿಂಗಳಲ್ಲಿ ಬೆಂಗಳೂರು ಮತ್ತು ಕೆ. ಜಿ. ಎಫ್. ನಲ್ಲಿ ತಲಾವಾರು ಹಂಚಲಾದ ಆಹಾರ ಧಾನ್ಯಗಳ ಪ್ರಮಾಣ?

(ಇ) ಕರ್ನಾಟಕ ರಾಜ್ಯದ ನಾನಾ ಪಟ್ಟಣಗಳಿಗೆ ಭಿನ್ನವಾಗಿ ಆಹಾರ ಧಾನ್ಯಗಳ ಹಂಚಿಕೆ ಮಾಡುತ್ತಿರುವುದಕ್ಕೆ ಆಧಾರವೇನು ?

ಶ್ರೀ ಎ. ಲಕ್ಷ್ಮೀಸಾಗರ್ (ಆಹಾರ ಕಾನೂನು ನಾಗರೀಕ ಸರಬರಾಜು ಮಂತ್ರಿಗಳು).—

(ಅ) ಕರ್ನಾಟಕ ರಾಜ್ಯದಲ್ಲಿ ಹಂಚಲಾಗುತ್ತಿರುವ ಆಹಾರ ಧಾನ್ಯಗಳ ಪ್ರಮಾಣ ಈ ಕೆಳಗಿನಂತಿವೆ:

ಕ್ರಮ ಸಂಖ್ಯೆ	ಆಹಾರ ಧಾನ್ಯಗಳು	ಬೆಂಗಳೂರು (ಅಪ)	ಉಳಿದ (ಆಪ)
೧	೨	೩	೪
೧	ಅಕ್ಕಿ	ಘಟಕ ಒಂದಕ್ಕೆ ೨ ಕೆ. ಗ್ರಾಂನಂತೆ ಆಥವಾ ವಯಸ್ಕರಿಗೆ ೪ ಕೆ. ಜಿ. ಯಂತೆ ಗರಿಷ್ಟ ಒಂದು ಕಾರ್ಡಿಗೆ ಒಂದು ತಿಂಗಳಿಗೆ ೪೦ ಕೆ. ಜಿ.	ಒಂದು ಕಾರ್ಡಿಗೆ ಒಂದು ತಿಂಗಳಿಗೆ ೧೦ ರಿಂದ ೧೫ ಕೆ. ಜಿ.
೨	ಗೋಧಿ	ನಿರ್ಭಂದವಿಲ್ಲ.	ನಿರ್ಭಂದವಿಲ್ಲ.
೩	ಸಕ್ಕರೆ	ಘಟಕ ಒಂದಕ್ಕೆ ೫೦೦ ಗ್ರಾಂನಂತೆ ಗರಿಷ್ಟ ೬ ಕೆ. ಜಿ. ಒಂದು ಕಾರ್ಡಿಗೆ ಒಂದು ತಿಂಗಳಿಗೆ	ಘಟಕ ಒಂದಕ್ಕೆ ೫೦೦ ಗ್ರಾಂನಂತೆ ಗರಿಷ್ಟ ೫ ಕೆ. ಜಿ. ಒಂದು ಕಾರ್ಡಿಗೆ ಒಂದು ತಿಂಗಳಿಗೆ.
೪	ತಾಳೆಎಣ್ಣೆ	ಪ್ರತಿ ಕಾರ್ಡಿಗೆ ಒಂದು ತಿಂಗಳಿಗೆ ೬ ಕೆ. ಜಿ.	ಪ್ರತಿ ಕಾರ್ಡಿಗೆ ಒಂದು ತಿಂಗಳಿಗೆ ೨. ಕೆ. ಜಿ.
೫	ಸೀಮೆಎಣ್ಣೆ	ಒಂದು ಜನರಕ್ಕೆ ೪ ಲೀಟರ್ ಗರಿಷ್ಟ ೧೬ ಲೀಟರ್ ಒಂದು ಕಾರ್ಡಿಗೆ ಒಂದು ತಿಂಗಳಿಗೆ	೮ ಲೀಟರ್ ಒಂದು ಕಾರ್ಡಿಗೆ ಒಂದು ತಿಂಗಳಿಗೆ

	(ಆ)	ಬೆಂಗಳೂರು	ಕೆ. ಜಿ. ಎಫ್. ಬಿ. ಜಿ. ಎಂ. ಎಲ್.
೧	ಅಕ್ಕಿ	ಘಟಕ ಒಂದಕ್ಕೆ ೨ ಕೆ. ಗ್ರಾಂ ನಂತೆ ಆಥವಾ ವಯಸ್ಕರಿಗೆ ೪ ಕೆ. ಜಿ. ಯಂತೆ ಗರಿಷ್ಟ ಒಂದು ಕಾರ್ಡಿಗೆ ಒಂದು ತಿಂಗಳಿಗೆ ೪೦ ಕೆ. ಜಿ.	ಕೆ. ಜಿ. ಎಫ್. ಪಟ್ಟಣದಲ್ಲಿ ಪ್ರತಿ ಕಾರ್ಡಿಗೆ ೮ ಕೆ. ಜಿ. ಚಿನ್ನದ ಗಣಿಯಲ್ಲಿ ಪ್ರತಿ ವಯಸ್ಕರಿಗೆ ೫. ೪. ಜಿ.
೨	ಗೋಧಿ	ನಿರ್ಭಂದವಿಲ್ಲ.	ನಿರ್ಭಂದವಿಲ್ಲ.
೩	ಸಕ್ಕರೆ	ಘಟಕ ಒಂದಕ್ಕೆ ೫೦೦ ಗ್ರಾಂನಂತೆ ಗರಿಷ್ಟ ೬ ಕೆ.ಜಿ. ಒಂದು ಕಾರ್ಡಿಗೆ ಒಂದು ತಿಂಗಳಿಗೆ	ಕೆ. ಜಿ. ಎಫ್, ಪಟ್ಟಣದಲ್ಲಿ ಪ್ರತಿ ಕಾರ್ಡಿಗೆ ೭ ಕೆ ಜಿ. ಮತ್ತು ಬಿ. ಜಿ. ಎಂ. ಎಲ್ ನಲ್ಲಿ ಒಂದು ಕಾರ್ಡಿಗೆ ೪ ಕೆ. ಜಿ.
೪	ತಾಳೆಎಣ್ಣೆ	ಪ್ರತಿ ಕಾರ್ಡಿಗೆ ತಿಂಗಳಿಗೆ ೬ ಕೆ.ಜಿ.	ಕೆ. ಜಿ. ಎಫ್. ನಲ್ಲಿ ಪ್ರತಿ ಕಾರ್ಡಿಗೆ ೩ ಕೆ. ಜಿ. ಯಂತೆ ಬಿ. ಜಿ. ಎಂ. ಎಲ್. ನಲ್ಲಿ ಪ್ರತಿ ಕಾರ್ಡಿಗೆ ೨ ಕೆ. ಜಿ. ಯಂತೆ

೧	೨	೩	೪
೫	ಸೀಮೆಎಣ್ಣೆ	ಒಂದು ಪಾರಕ್ಕೆ ೪ ಲಿ. ಗರಿಷ್ಟ ೧೬ ಲೀಟರ್ ಒಂದು ಕಾರ್ಡಿಗೆ ಒಂದು ತಿಂಗಳಿಗೆ.	ಮಿತಿ ಇಲ್ಲ.

(ಇ) ಚಾರಿತ್ರಿಕ ವಾಸ್ತವಾಂಶ ಪೀಠಿ ಧಾರಣೆ ಮತ್ತು ವಿವಿಧ ಪಟ್ಟಣಗಳ ಆವಶ್ಯಕತೆಗಳ ಆಧಾರದ ಮೇಲೆ ಆಹಾರ ಧಾನ್ಯಗಳನ್ನು ಹಂಚಲಾಗುತ್ತಿದೆ.

ಕನ್ನಡ ಕಾವಲು ಮತ್ತು ಗಡಿ ಸಲಹಾ ಸಮಿತಿ ಅಧ್ಯಕ್ಷರಿಗೆ ಅಧಿಕಾರಗಳನ್ನು ನೀಡುವ ಬಗ್ಗೆ

೧೮೧ (೪೩೬) ಶ್ರೀ ಆರ್.ಎಸ್. ಮಾನೆ.—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕನ್ನಡ ಕಾವಲು ಮತ್ತು ಗಡಿ ಸಲಹಾ ಸಮಿತಿ ಅಧ್ಯಕ್ಷರಿಗೆ ಆಡಳಿತಾತ್ಮಕ ಅಥವಾ ಕಾರ್ಯಕಾರಿ ಅಧಿಕಾರಗಳನ್ನು ಕೊಡಲಾಗಿದೆಯೇ?

ಆ) ಹಾಗಿದ್ದರೆ ಯಾವ ಅಧಿನಿಯಮದ ಪ್ರಕಾರ, ಇಲ್ಲದಿದ್ದರೆ, ಅವರ ಕರ್ತವ್ಯಗಳು ಮತ್ತು ಅಧಿಕಾರ ವ್ಯಾಪ್ತಿ?

ಇ) ಶ್ರೀ ಪಾಟೀಲ್ ಪುಟ್ಟಪ್ಪನವರು ಸರ್ಕಾರಿ ಮತ್ತು ಅರೆಸರ್ಕಾರಿ ಕಚೇರಿಗಳಿಗೆ ಭೇಟಿ ನೀಡಿ ಸಭೆಗಳನ್ನು ಕರೆದು ನೌಕರರಿಗೆ ಕಚೇರಿಗಳಲ್ಲಿ ಕನ್ನಡವನ್ನು ಬಳಸದಿದ್ದರೆ ಅಮಾನತ್ತಿನಲ್ಲಿಡುವುದಾಗಿಯೂ ಕೆಲಸದಿಂದ ವಜಾ ಮಾಡುವುದಾಗಿ ಆದೇಶ ನೀಡುವುದು, ಹೆದರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಅಂಗಡಿ ಮಾಲೀಕರು, ಕೈಗಾರಿಕೋದ್ಯಮಿಗಳೂ, ಖಾಸಗೀ ಸಂಸ್ಥೆಯವರು ನಾಮ ಫಲಕಗಳನ್ನು ಕನ್ನಡದಲ್ಲಿ ಬರೆಸಿಕೊಳ್ಳದಿದ್ದಲ್ಲಿ ಕಾನೂನು ಪ್ರಕಾರ ಶಿಕ್ಷೆಗೊಳಪಡಿಸುವುದಾಗಿ ತಿಳಿಸಿ ಬೆಳಗಾವಿ ಮತ್ತು ಧಾರವಾಡ ಜಿಲ್ಲಾಧಿಕಾರಿಗಳು ಪತ್ರ ಹೊರಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಯಾರ ಆದೇಶದ ಮೇಲೆ ಜಿಲ್ಲಾಧಿಕಾರಿಗಳು ಈ ಪತ್ರಗಳನ್ನು ಹೊರಡಿಸಿದ್ದಾರೆ?

ಉ) ಕಾನೂನಿನ ರೀತ್ಯಾ ಯಾವ ಅಧಿಕಾರವೂ ಇಲ್ಲದೆ ಸರ್ಕಾರಿ ನೌಕರರಿಗೂ ಮತ್ತು ಇತರರಿಗೂ ಲಿಖಿತ ಮತ್ತು ಮೌಖಿಕವಾಗಿ ಆಜ್ಞೆಯನ್ನು ಕೊಡುತ್ತಿರುವುದರಿಂದ ಕನ್ನಡ ಕಾವಲು ಮತ್ತು ಗಡಿ ಸಲಹಾ ಸಮಿತಿ ಅಧ್ಯಕ್ಷರ ವಿರುದ್ಧ ಸರ್ಕಾರವು ಏನು ಕ್ರಮ ತೆಗೆದುಕೊಳ್ಳಲಿದೆ?

ಊ) ಕನ್ನಡ ಕಾವಲು ಮತ್ತು ಗಡಿ ಸಲಹಾ ಸಮಿತಿ ನೇಮಕ ಮಾಡಿದಾಗಿನಿಂದ ಇಲ್ಲಿಯವರೆಗೂ ಆಗಿರುವ ವೆಚ್ಚವೆಷ್ಟು?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ. ಸಮಿತಿಯ ಕಾರ್ಯವ್ಯಾಪ್ತಿಯನ್ನು ಅನುಬಂಧದಲ್ಲಿ ನಮೂದಿಸಲಾಗಿದೆ.

ಇ) ಶ್ರೀ ಪಾಟೀಲ್ ಪುಟ್ಟಪ್ಪನವರು ಕಚೇರಿಗಳಿಗೆ ಭೇಟಿ ಇತ್ತು ಸಭೆಗಳನ್ನು ನಡೆಸಿ ಆಡಳಿತದಲ್ಲಿ ಕನ್ನಡವನ್ನು ಹೆಚ್ಚು ಹೆಚ್ಚು ಬಳಕೆಗೆ ತರಲು ಇರುವ ತೊಂದರೆಯನ್ನು ತಿಳಿದುಕೊಂಡು ಸರಿಪಡಿಸಲು ಪ್ರಯತ್ನಿಸಿದರೇ ವಿನಃ ಕಚೇರಿಗಳಲ್ಲಿ ಕನ್ನಡವನ್ನು ಬಳಕೆಗೆ ತರದಿದ್ದರೆ ಅಮಾನತ್ತಿನಲ್ಲಿಡುವುದಾಗಿ, ಕೆಲಸದಿಂದ ವಜಾ ಮಾಡುವುದಾಗಿ ಯಾರನ್ನೂ ಹೆದರಿಸಿ ಆಜ್ಞೆಯನ್ನು ಹೊರಡಿಸಿರುವುದಿಲ್ಲ ಅಥವಾ ಹೊರಡಿಸುತ್ತಾ ಇಲ್ಲ.

ಈ) ಹೌದು. ಅಧಿಸೂಚನೆ ಸಂಖ್ಯೆ ಎಸ್.ಡಬ್ಲ್ಯು.ಎಲ್. ೪ ಎಲ್.ಎಸ್.ಸಿ. ೮೪, ದಿನಾಂಕ ೧೧-೧-೧೯೮೫ರ ಪ್ರಕಾರ.